# ಜೀವನದ ಸಂಕೀರ್ಣತೆ

ಡಾ. ವಸಂತ ಕುಮಾರ್

ಜಗತ್ತು ಬದಲಾದಂತೆ ಸಾಮಾಜಿಕ ಪರಿಸರ, ಜನಜೀವನ ಬದಲಾಗುತ್ತದೆ. ಆಧುನಿಕ ಜೀವನದಲ್ಲಿ ನಗರೀಕರಣ, ಜನಸಂಖ್ಯೆಯ ಹೆಚ್ಚಳ, ಜಾಗತೀಕರಣ ಮೊದಲಾದ ವಿದ್ಯಮಾನಗಳೊಂದಿಗೆ ಜೀವನಶೈಲಿ ವೇಗವಾಗಿ ಮಾರ್ಪಡುತ್ತಿದೆ. ಹಿಂದಿನ ಸರಳ ಜೀವನಕ್ರಮ ಮರೆಯಾಯಿತೇನೋ ಎಂಬ ಮಾತು ಎಲ್ಲೆಡೆ ಕೇಳಿಬರುತ್ತಿದೆ. ಈ ಹಿನ್ನೆಲೆಯಲ್ಲಿ ಸಂಕೀರ್ಣ ಬದುಕಿನ ಬಗ್ಗೆ ಚಿಂತನೆ ನಡೆಸಿರುವ ಲೇಖಕರು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರು. ರಾಮಕೃಷ್ಣ ಮಠದ ಭಕ್ತರಾಗಿರುವ ಅವರು ಈ ಪತ್ರಿಕೆಯಲ್ಲಿ ಅನೇಕ ಉತ್ತಮ ಲೇಖನಗಳನ್ನು ಬರೆದಿದ್ದಾರೆ.

ನಮ್ಮೆಲ್ಲರ ಜೀವನವೂ ಕ್ಲಿಷ್ಟತೆಯಿಂದ ಕೂಡಿದೆ. ಅದರಲ್ಲಿ ವೈವಿಧ್ಯತೆ ಇರಬಹುದು. ಅದಕ್ಕೆ ಕಾರಣಗಳೂ ವಿಧವಿಧವಾಗಿರಬಹುದು. ಬಹು ಜನರಿಗೆ ಹಣ ಸಾಲದಾಗಿರಬಹುದು, ಕೆಲವರಿಗೆ ಸುಖ ಕಡಿಮೆಯಾಗಿರಬಹುದು. ಕೆಲವರಿಗೆ ಕಾಲ ಸಾಲದೆನ್ನಿಸಿರಬಹುದು. ಇನ್ನು ಕೆಲವರಿಗೆ ತೃಪ್ತಿ, ಸಮಾಧಾನಗಳ ಕೊರತೆ ಇರಬಹುದು. ಮತ್ತೆ ಕೆಲವರನ್ನು ಅಸೂಯೆ, ಅಸಹನೆ ಕಾಡುತ್ತಿರಬಹುದು. ಇನ್ನು ಕೆಲವರಿಗೆ ಹೆಸರು, ಕೀರ್ತಿ ಕಡಿಮೆಯಾಯಿತೆನ್ನಿಸಿರಬಹುದು. ಅನೇಕರಿಗೆ ಶಾಂತಿ ಇಲ್ಲದಿರಬಹುದು. ಜಗನ್ಮಾತೆ ಹೇಗೆ ಹಲವು ನಾಮ ರೂಪಗಳಿಂದ ಕೂಡಿದ ಅವಳ ಹಲವು ಅಂಶಗಳಿಂದ ಬಹು ಬಗೆಯಾಗಿ ಈ ಪ್ರಪಂಚದಲ್ಲಿ ಆವಿರ್ಭಾವ ಹೊಂದಿ ರಾರಾಜಿಸುತ್ತಿರುವಳೋ ಹಾಗೆಯೇ ಈ ಕೊರತೆಗಳೂ ಕೂಡ ವಿಧವಿಧವಾಗಿ ಬೇರೆ ಬೇರೆ ಹೆಸರು ರೂಪಗಳಿಂದ ನಮ್ಮ ಜೀವನ ದಲ್ಲಿ ವಿಹರಿಸುತ್ತಾ ನಮ್ಮನ್ನು ಕಾಡುತ್ತಿವೆ. ಇದು ಬಹುಶಃ ಎಲ್ಲಾ ಕಾಲಗಳಲ್ಲಿಯೂ ಇದ್ದಂತೆ ಕಾಣುವುದು; ಎಲ್ಲಾ ವಯಸ್ಸಿನವರನ್ನೂ ಕಾಡುತ್ತಿರುವುದು, ಹಾಗೂ ಎಲ್ಲಾ ಸ್ತರದ ವ್ಯಕ್ತಿಗಳಲ್ಲೂ ಕಾಣಬಹುದಾಗಿದೆ. ಇವುಗಳಿಂದ ಆಗಾಗ್ಗೆ ಮಾನಸಿಕ ಸ್ವಾಸ್ಥ್ಯಕ್ಕೆ ಭಂಗವುಂಟಾಗುವುದು. ಅದು ದೇಹಾರೋಗ್ಯದ ಮೇಲೂ ಪ್ರಭಾವ ಬೀರುವುದು. ದೇಹದ ಅನಾರೋಗ್ಯಕ್ಕೆ ಔಷಧಿಗಳು ಇವೆ. ಮಾನಸಿಕ ಪ್ರಕ್ಷುಬ್ಧತೆಗೂ ಕೆಲವು ಮದ್ದುಗಳು ಇವೆ. ಅವು ತಕ್ಕಮಟ್ಟಿಗೆ ಕೆಲಸ ಮಾಡುತ್ತವೆ. ಅವನ್ನು ಬಿಡಲಾಗದೆ ತೆಗೆದುಕೊಳ್ಳುತ್ತೇವೆ. ಈ ಕ್ಲೇಶಗಳ ಹಿಂದೆ ಅವಿತು ಕೊಂಡಿರುವ, ಸದಾ ಕ್ರಿಯಾಶೀಲವಾದ, ಕಾರಣವೊಂದಿದೆ. ಅದೇ ಆಸೆ. ಅದು ನಮ್ಮ ಎಲ್ಲಾ ಕರ್ಮಗಳ ಹಿಂದೆ, ಪ್ರಯತ್ನಗಳ ಹಿಂದೆ ಇದ್ದು ನಮ್ಮನ್ನು ಆಟವಾಡಿಸುತ್ತಿದೆ.

### ಹಣ

ಹಣವೇ ಜೀವನಕ್ಕೆ ಮುಖ್ಯ, ಅದೊಂದಿದ್ದರೆ ನೀನು ಏನನ್ನಾದರೂ ಮಾಡಬಹುದು ಎಂದು ಆಸೆ ನಮ್ಮ ಮನಸ್ಸಿಗೆ ಹೇಳಿಕೊಡುವುದು. ನಾವು ಹಣವನ್ನು ಬೆನ್ನಟ್ಟಿ ಹೋದರೆ ಅದು ಬೇರೊಂದೆಡೆಗೆ ಹರಿದು ಹೋಗುತ್ತಾ ನಮ್ಮನ್ನು ಸೆಳೆದುಕೊಂಡು ಹೋಗುವುದು. ಹಣವಿದ್ದರೆ ಏನಂತೆ, ಅದಕ್ಕೆ ತಕ್ಕಂತೆ ಅಂತಸ್ತು, ಗೌರವ ಇರಬೇಡವೇ ಎಂದು ಆಸೆ ಇನ್ನೊಂದು ಮೆಟ್ಟಲನ್ನು ಏರಿಸುವುದು. ಇವು ಇನ್ನಷ್ಟು ಪರಿಕರ, ವಸ್ತು, ವಾಹನ, ಸಂಬಂಧ, ಪ್ರತಿಷ್ಠೆಗಳನ್ನು ನಮ್ಮ ಜೀವನಕ್ಕೆ ಸೇರಿಸುವುವು. ಇಷ್ಟಾದರೆ ಆಯಿತೆ, ಅಂತಸ್ತಿಗೆ ಸಮನಾದ ಕೀರ್ತಿ ದೊರಕಬೇಡವೆ? ಆಗ ತಾನೇ ಹೆಚ್ಚು ಹಣ ಬರುವುದು? ಎಂದು ಆಸೆ ಮದವೇರಿಸುವುದು. ಈ ಪ್ರಯತ್ನಗಳ ಗುಂಗಿನಲ್ಲಿ ವಿವೇಕ ಜಾರುವುದು. ಮೆಟ್ಟಿಲಿನಿಂದ ಉರುಳಿದ ಚೆಂಡಿನಂತೆ ನಮ್ಮ ಜೀವನ ಜಾರಿ ಬೀಳಲಾರಂಭಿಸುವುದು. ಒಡೆದ ಗಾಜಿನಂತೆ, ಅನಿರೀಕ್ಷಿತ ದಿಕ್ಕುಗಳಲ್ಲಿ ಹಣ ಹಾರಿಹೋಗಲಾರಂಭಿಸುವುದು. ಅವನ್ನು ಹಿಡಿಯಲಾರದೆ ಜೀವಿ ಕಂಗಾಲಾಗುವನು. ಹಣದ ಆಸೆಯ ಕುದುರೆ ನಮ್ಮನ್ನು ಕಷ್ಟಗಳ ಮಧ್ಯೆ ಉರುಳಿಸಿ ಹಾರಿ ಹೋಗುವುದು.

### ಆಸ್ತಿ-ಪಾಸ್ತಿ

ಸುಖವನ್ನು ನಾವು ಅನುಭವಿಸಿದರೆ ಸಾಕೆ? ನಮ್ಮ ಮುಂದಿನ ಪೀಳಿಗೆ ನಮ್ಮಂತೆ ಕಷ್ಟಪಡದೆ, ನಮಗಿಂತ ಹೆಚ್ಚು ಸುಖವಾಗಿರಲು ನಾವು ಪ್ರಯತ್ನಿಸಬೇಕಲ್ಲವೆ? ಅದಕ್ಕಾಗಿ ನಾವು ಸ್ವಲ್ಪ ಕಷ್ಟಪಡಲು, ತ್ಯಾಗ ಮಾಡಲು ಹಿಂಜರಿಯಬಾರದಲ್ಲವೆ? ಎಂದು ಆಸ್ತಿಯ

ಗಳಿಕೆಗೆ ಆಸೆ ನಮ್ಮ ಮನಸ್ಸಿನಲ್ಲಿ ಅಸ್ತಿಭಾರ ಹಾಕುವುದು. ಮಗು ಒಂದೇ ಇದ್ದರೂ ನಾಲ್ಕಾರು ದಿಕ್ಕುಗಳಲ್ಲಿ ನಿವೇಶನಗಳ ಖರೀದಿಗೆ ತಂದೆತಾಯಿಗಳು ಮುಂದಾಗುವರು. ಮಕ್ಕಳ ಭವಿಷ್ಯ ಜೀವನ ಕ್ಕಾಗಿ ಆಭರಣಗಳನ್ನು ಕಲೆ ಹಾಕುವರು. ಇಂದಿನ ದಿನಗಳಲ್ಲಿ ನಾವು ಕಾಣುವಂತೆ, ಮಕ್ಕಳು ಸ್ವತಂತ್ರರಾದ ಮೇಲೆ ಇವನ್ನೆಲ್ಲಾ ತಂದೆತಾಯಿಗಳ ಬಳಿಯೇ ಬಿಟ್ಟು ತಮಗೆ ಅನುಕೂಲವಾದೆಡೆ ತಮ್ಮ ಮನೆಗಳನ್ನೋ ಆಸ್ತಿಯನ್ನೋ ಸೃಷ್ಟಿಸಿ, 'ನೀವು ಮಾಡಿರುವು ದನ್ನು ಜೋಪಾನವಾಗಿ ಇಟ್ಟಿರಿ, ಸಮಯ ಬಂದಾಗ ಮತ್ತಾರಿ ಗಾದರೂ ಕೊಡಿ, ನಾವು ಅವನ್ನು ರಕ್ಷಿಸಲಾರೆವು, ಅನುಭವಿಸ ಲಾರೆವು' ಎಂದು ತಿಳಿಸುವರು. ಮಕ್ಕಳಿಗೇ ಆಸ್ತಿ ಸಮೃದ್ಧವಾಗಿ ಇರುವಾಗ  ಮತ್ತಾರಿಗೆ ನಾವು ಇವನ್ನೆಲ್ಲ ಕೊಡುವುದು ಎಂಬ ಯೋಚನೆ ಗಳಿಸಿದವರನ್ನು ಕಾಡುತ್ತಿರುವುದು.

### ಸುಖಾಪೇಕ್ಷೆ

ಜೀವನದಲ್ಲಿ ಸುಖ, ಪ್ರಪಂಚದಲ್ಲಿ ಸುಖ, ಸಂಸಾರದಲ್ಲಿ ಸುಖ — ಇವನ್ನು ಅರಸುವುದು ಸ್ವಾಭಾವಿಕ. ಇತರರು ಸುಖ ವಾಗಿರಲೆಂದು ಹರಸುವುದು ಸಾಮಾನ್ಯ. ಹೀಗೆ ಜೀವನ ಪ್ರಾರಂಭವಾದರೂ ಕ್ರಮೇಣ ನಮ್ಮ ಅನುಭವಕ್ಕೆ ಬರುವುದು, ಇದಕ್ಕೆ ಕೊನೆಯಿಲ್ಲ , ಸುಖವನ್ನು ಎಷ್ಟೇ ಅರಸಿದರೂ ತೃಪ್ತಿ ಬರುವುದಿಲ್ಲ, ಇನ್ನೂ ಬೇಕೆನಿಸುವುದು. ಅದರಿಂದ ಕಷ್ಟನಷ್ಟಗಳು ಬರುತ್ತವೆ. ಅವನ್ನು ಎದುರಿಸುವುದರಲ್ಲಿ ಸುಖದ ಬೇಟೆ ಸಾಗು ತ್ತದೆ. ಸುಖ ನೀರಸವಾಗುತ್ತದೆ. ಅನೇಕ ವೇಳೆ, ತಾಯಿ ಮಗಳಿಗೆ ಹೇಳುತ್ತಾಳೆ, 'ನೀನು ಸುಖವಾಗಿರಬೇಕು, ನನ್ನಂತೆ ಕಷ್ಟಗಳಿಗೆ ಒಳಗಾಗಬಾರದು' ಎಂದು. ಆದರೆ ಅವಳ ತಾಯಿಯೂ ಅವಳಿಗೆ ಹೀಗೆಯೇ ಬಯಸಿದ್ದಳು ಎಂಬುದನ್ನು ಗಮನಿಸಿದಾಗ, ಸುಖದ ಬೇಟೆ ಕಷ್ಟದಲ್ಲಿ , ನಿರಾಶೆಯಲ್ಲಿ , ದುಃಖದಲ್ಲಿ ಪರ್ಯವಸಾನ ವಾಗುವುದು ಕಾಣಬರುತ್ತದೆ. ಇನ್ನು, ತಮ್ಮ ಸುಖಗಳಿಗಾಗಿ ಇತರರಿಗೆ ಹಾನಿಯುಂಟುಮಾಡುವ, ಮೋಸ ಮಾಡುವ ದಾರಿ ಯನ್ನು ಹಿಡಿಯುವವರ ಗತಿ ಜೈಲಿನಲ್ಲಿಯೋ ಸಮಾಜದಲ್ಲಿಯೋ ಶಿಕ್ಷೆ ಅನುಭವಿಸುತ್ತಿರುವುದನ್ನು ಕಾಣಬಹುದಾಗಿದೆ. ಆಮೋದ ಪ್ರಮೋದಗಳೂ ನಮ್ಮ ಬಯಕೆಗಳನ್ನು ತಾತ್ಕಾಲಿಕವಾಗಿ ತೃಪ್ತಿ ಪಡಿಸುತ್ತವೆ. ಮಿತ್ರರು, ಇಷ್ಟರು, ನೆಂಟರುಗಳ ಮೂಲಕ ದೊರೆ ಯುವ ಸಂತೋಷವೂ ಅಲ್ಪಕಾಲದ್ದಾಗಿ ನಿಷ್ಠುರದಲ್ಲಿ ಕೊನೆ ಯಾಗುತ್ತವೆ. ರಂಜನೆಗಾಗಿ ನಮ್ಮವರೆಂದು ಅವರೊಡನೆ ಹೊರ ಟರೆ ದಾಕ್ಷಿಣ್ಯ, ವೈಮನಸ್ಯ, ನಷ್ಟ ಕಾದಿರುತ್ತವೆ. ಅಂತೂ ಸುಖ ಅಸುಖದಿಂದ ಸುತ್ತುವರಿಯಲ್ಪಟ್ಟಿರುತ್ತದೆ.

### ಹೆಸರು-ಕೀರ್ತಿ

ಕೆಲವರು ಹೆಸರು, ಕೀರ್ತಿಗಳ ಸುಖಕ್ಕೆ ಕಷ್ಟ ಪಡುತ್ತಾರೆ. ನಾವು ಮಾಡುವ ಕೆಲಸಕ್ಕಿಂತ ಹೆಚ್ಚಾಗಿ ನಾವು ಮಾಡಿದೆವೆಂಬುದು ಮುಖ್ಯ ಅವರಿಗೆ. ಪ್ರಶಂಸೆ ಪಾರಿತೋಷಕ ಮನ್ನಣೆಗಳನ್ನು ನಿರೀ ಕ್ಷಿಸುತ್ತಾರೆ. ದಿನೇ ದಿನೇ ಅವರ ಕೀರ್ತಿ ಹೆಚ್ಚಬೇಕೆಂದು ಆಶಿಸಿ ಅದಕ್ಕಾಗಿ ಹೆಚ್ಚು ಪ್ರಯತ್ನ ಮಾಡುತ್ತಾರೆ. ಹೊಗಳಿಕೆಯ ಲಂಚಕ್ಕೆ ಕೈಯೊಡ್ಡುತ್ತಾರೆ. ಆ ಕೈಗಳಿಗೆ ಪೆಟ್ಟು ಬಿದ್ದಾಗ ಪರಿತಪಿಸುತ್ತಾರೆ. ಕೀರ್ತಿಯ ಹಿಂದೆ ಹೋದವರಿಗೆ ಅಪಕೀರ್ತಿಯ ನೆರಳು ಬೀಳು ವುದು. ಕೆಲವು ವೇಳೆ ಕೀರ್ತಿಯ ಹಿಂದೆ ಹಣದ ಆಸೆ ಇರುವುದು. ಅದನ್ನು ಮುಚ್ಚಿಕೊಳ್ಳಲು ತಾವು ಸೇವೆ ಮಾಡುತ್ತಿರುವುದಾಗಿ ಹೇಳಿಕೊಳ್ಳುವರು. ಕೆಲವರು ಹೆಸರಿಗಾಗಿ ಸೇವೆ ಮಾಡಬಯಸು ತ್ತಾರೆ. ಸೇವಾಸಂಸ್ಥೆಗಳನ್ನು ತೆರೆಯುತ್ತಾರೆ. ಸೇವೆಯ ಹಿಂದೆಯೂ ಹಣ, ಕೀರ್ತಿಯ ಆಸೆ ಇರುವುದರಿಂದ ಅಪಕೀರ್ತಿ ಅವಮಾನ ಮುಂತಾದ ಕಹಿ ಫಲಗಳು ಬಂದು ಅವರ ಸೇವಾಕಾರ್ಯಕ್ಕೆ ತೆರೆ ಬೀಳುವುದು.

### ಲೋಭ

ಹೆಚ್ಚು ಹಣದ ಬಯಕೆ ಅದಕ್ಕೆ ಸಂಬಂಧಪಟ್ಟ ಸ್ನೇಹಿತರನ್ನು ಒದಗಿಸುವುದು. ಗಳಿಸುವ ಚಟ ಅದನ್ನು ಸಂಗ್ರಹಿಸುವ ಚಟಕ್ಕೆ ದಾರಿ ಮಾಡಿಕೊಡುತ್ತದೆ. ಅದೇ ಲೋಭ. ಹಣ ಬಂದದ್ದೆಲ್ಲಾ ನನಗೇ ಬರಲಿ ಎಂಬ ಅತಿ ಆಸೆಯೂ ಮೂಡುವುದು. ಅವರ ಲ್ಲಿರುವ ಹೆಚ್ಚು ಹಣ ಇತರರ ಗಮನಕ್ಕೆ ಬಾರದಂತೆ ಮಾಡಲು ಸರಳತೆಯ ಸೋಗಿನಿಂದ ಹೊರಗೆ ಸರಳರಂತೆ ಕಾಣಲು ಯತ್ನಿಸು ತ್ತಾರೆ. ಇದು ಅಂಗೈಯಿಂದ ದೇಹವನ್ನು ಮುಚ್ಚಿಕೊಳ್ಳಲು ಪ್ರಯ ತ್ನಿಸಿದಂತಾಗುವುದು. ಬರಬೇಕು, ಆದರೆ ಹೋಗಬಾರದು ಎಂಬ ದೃಷ್ಟಿ ಅವರನ್ನು ಲೋಭಿಗಳನ್ನಾಗಿ ಮಾಡುತ್ತದೆ. ಸುಖಜೀವನಕ್ಕೆ ಬೇಕಾದುದೆಲ್ಲ ಯಥೇಚ್ಛವಾಗಿ ಇದ್ದರೂ ಕೊಡಬೇಕಾಗಿ ಬಂದಾಗ ಸಣ್ಣತನ ತೋರುವರು. ಮರ್ಯಾದೆ ಹೋದರೂ ಪ್ರಾಣ ಹೋದರೂ ಹಣ ಅವರ ಕೈಯಿಂದ ಹೋಗಬಾರದು. ಪುಕ್ಕಟೆ ಯಾಗಿ ಏನು ಸಿಕ್ಕಿದರೂ ಸರಿಯೆ, ನನಗೆ ಎರಡಿರಲಿ ಎನ್ನುವರು. ಸಾಮಾನ್ಯವಾಗಿ ಅವರು ಕೊಳಕಾಗಿರುವರು. ರೋಗ ಬಂದರೆ ಅದಕ್ಕೇ ಹೊಂದಿಕೊಳ್ಳುವರು, ವೈದ್ಯರಿಗೆ ಕೊಡುವ ಹಣವನ್ನು ಉಳಿಸಲು ಯತ್ನಿಸುವರು. ಯೋಗ್ಯವಾದುದನ್ನು ಅವರು ಸ್ವೀಕರಿ ಸುವುದಿಲ್ಲ. ಎಲ್ಲವನ್ನೂ ಎಲ್ಲರನ್ನೂ ಸಂದೇಹಿಸುತ್ತಾ ಋಜು ಮಾರ್ಗವನ್ನು ಹಳಿಯುವರು. **ನಾಸ್ತಿ ಲೋಭಸಮೋ ವ್ಯಾಧಿಃ** — 'ಲೋಭಕ್ಕೆ ಸಮನಾದ ವ್ಯಾಧಿ ಇಲ್ಲ' ಎಂಬ ಸುಭಾಷಿತದಂತೆ, ಹಣ ಇದ್ದೂ ಇಲ್ಲದವರಂತೆ ಅವರು ನರಳುತ್ತಾರೆ.

ಲೋಭಸಂಭವರು ಇನ್ನಿಬ್ಬರಿರುವರು. ಅವರೇ ಕಳ್ಳತನ ಮತ್ತು ಸುಳ್ಳುತನ. ಇವರು ಅನ್ಯೋನ್ಯ ಸಹೋದರರು; ಒಬ್ಬ ರನ್ನು ಬಿಟ್ಟು ಇನ್ನೊಬ್ಬರಿರಲಾರರು. ತಮ್ಮದಲ್ಲದುದನ್ನು ಪಡೆ ಯಲು ಪ್ರಯತ್ನಿಸುತ್ತಾರೆ. ನೋಡಲು ಭಕ್ತರು. ದೇವಸ್ಥಾನಗಳಲ್ಲಿ, ಮಠಗಳಲ್ಲಿ ಭಕ್ತರ ವಸ್ತುಗಳನ್ನು ಸ್ವಲ್ಪವೂ ಸುಳಿವು ಸಿಗದಂತೆ ತೆಗೆದುಕೊಳ್ಳುವರು. ಅವರೆಂತಹ ಭಾಷಾಪ್ರೇಮಿಗಳೆಂದರೆ, ರವೀಂದ್ರ ನಾಥ ಠಾಕೂರರ ನೊಬೆಲ್ ಪಾರಿತೋಷಕವನ್ನು ಕದ್ದರು. ಅವ ರನ್ನು ಕಂಡುಹಿಡಿಯಲು ಪರಿಣತ ಪೋಲೀಸ್ ಅಧಿಕಾರಿಗಳು ಹಲವು ವರ್ಷ ಪ್ರಯತ್ನಿಸಿ ಸೋಲೊಪ್ಪಿಕೊಂಡರು. ಅದರ ನಕ ಲನ್ನು ನೊಬೆಲ್ ಸಮಿತಿಯಿಂದ ಸರಕಾರ ಪಡೆಯಬೇಕಾಯಿತು. ಸೋದರಿ ನಿವೇದಿತೆಯ ಜಪಮಾಲೆ, ಶ್ರೀರಾಮಕೃಷ್ಣರು ಮತ್ತು

ಶಾರದಾದೇವಿಯವರಿಗೆ ಸಂಬಂಧಪಟ್ಟ ಕೆಲವು ವಸ್ತುಗಳನ್ನು ಹಾರಿಸಿಕೊಂಡು ಹೋದವರು ಇದೇ ಗುಂಪಿಗೆ ಸೇರಿದವರು. ಸಮಯಕ್ಕೊಂದು ಸುಳ್ಳನ್ನು ಸೃಷ್ಟಿಸುವ ಚಮತ್ಕಾರ ಇವರಿಗಿರುತ್ತದೆ. ವ್ಯವಹಾರನಿಪುಣರಂತೆ ವರ್ತಿಸುತ್ತಾರೆ. ತಾವೇ ನೇಯ್ದ ಸುಳ್ಳಿನ ಬಲೆಯಲ್ಲಿ ಸಿಲುಕಿ ಅವರ ಜೀವನ ಕ್ಲಿಷ್ಟವಾಗುವುದು.

### ಕ್ರೋಧ

ಮುಖ್ಯವಾಗಿ ಹಣ, ವಸ್ತು ಅಥವಾ ಕೀರ್ತಿಯ ಕಾಮನೆಯಿಂದ ಸಾಮಾನ್ಯವಾಗಿ ಉದ್ಭವಿಸುವ ಭಾವನೆ ಕ್ರೋಧ. ಕಾಮನೆಗಳಿಗೂ ತಮಗೂ ಅಡ್ಡಿಯಾಗುವವರ ಮೇಲೆ ಕ್ರೋಧವುಂಟಾಗುತ್ತದೆ. ಕೆಲವರು ಕೋಪಿಸಿಕೊಳ್ಳುತ್ತಾರೆ, ಕೆಲವರು ಅವರಿಗೆ ಹಾನಿಯುಂಟುಮಾಡುತ್ತಾರೆ. ಅವರು ತಾಮಸಿಕರಾದರೆ ಕೊಲ್ಲುತ್ತಾರೆ. ವೈರ, ದ್ವೇಷ, ಮಾತ್ಸರ್ಯ, ಕೊಲೆಗಡುಕತನ ಇವೆಲ್ಲಾ ಕ್ರೋಧದ ರೂಪಗಳು. ತಮಗೆ ಅತ್ಯಂತ ಪ್ರಿಯರಾದವರನ್ನು ಕೊಂದರು ಎಂಬ ವಾರ್ತೆಯನ್ನು ಕೇಳಿದಾಗ ಇದು ಹೇಗೆ ಸಾಧ್ಯ ಎಂದು ಅರ್ಥವಾಗದೆ ಆಶ್ಚರ್ಯಪಡುತ್ತೇವೆ. **ಕಾಮಾತ್ ಕ್ರೋಧೋಽಭಿಜಾಯತೇ**–'ಕಾಮನೆಯಿಂದ ಕ್ರೋಧ ಉಂಟಾಗುತ್ತದೆ ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಕೊಟ್ಟಿರುವ ವಿವರಣೆಯಿಂದ ಇದು ನಮಗೆ ಅರ್ಥವಾಗುತ್ತದೆ *(ಭಗವದ್ಗೀತಾ: ೨-೬೨)*. ಕ್ರೋಧದಿಂದ ಇತರರಿಗಷ್ಟೇ ಅಲ್ಲದೆ ಅವರನ್ನು ನೆಚ್ಚಿರುವವರಿಗೂ ಹಾನಿಯುಂಟಾಗುತ್ತದೆ. ಆದರೆ ಅತ್ಯಂತ ಹೆಚ್ಚಾಗಿ ಆಗುವುದು ಅವರಿಗೆ. ಏಕೆಂದರೆ, ಅವರ ಜೀವನದಲ್ಲಿ ಪ್ರಗತಿ ಕಲ್ಯಾಣಗಳನ್ನು ಸಾಧಿಸುವ ಬದಲು, ಜೈಲಿನಲ್ಲಿಯೋ ಅಥವಾ ಕದಡಿದ ಬುದ್ಧಿ, ನಷ್ಟ, ದುಃಖ, ಪಶ್ಚಾತ್ತಾಪದ ಉರಿಯಲ್ಲಿ ಜೀವಮಾನವೆಲ್ಲಾ ಬೇಯುವ ನರಕಸದೃಶ ಜೀವನದಲ್ಲೋ ಅವರು ಕಾಲಯಾಪನೆ ಮಾಡಬೇಕಾಗುತ್ತದೆ. ಕ್ರೋಧ ಅವರ ನಾಶಕ್ಕೆ ಕಾರಣವಾಗುತ್ತದೆ. ಆದುದರಿಂದಲೇ ನಮ್ಮ ಹಿರಿಯರು, **ನಾಸ್ತಿ ಕ್ರೋಧಸಮೋ ರಿಪುಃ** –'ಕ್ರೋಧಕ್ಕೆ ಸಮನಾದ ಶತ್ರುವಿಲ್ಲ' ಎಂಬ ಸುಭಾಷಿತವನ್ನು ನಮ್ಮ ಮುಂದಿಟ್ಟಿರುವರು. ಪ್ರಸ್ತುತ ನಮ್ಮ ದೇಶವನ್ನು ಯುವ ದೇಶವೆಂದು ಸಂಬೋಧಿಸಲಾಗುತ್ತಿದೆ. ಇದಕ್ಕೆ ಕಾರಣ, ನೂರರಲ್ಲಿ ೬೭ ಮಂದಿ ೩೫ ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರುತ್ತಾರೆ. ಮೂರನೆ ಎರಡು ಭಾಗದ ಜನಸಂಖ್ಯೆ ೩೫ ವರ್ಷ ದಾಟದ ತರುಣರಿಂದ ತುಂಬಿದೆ ಭರತಖಂಡ! ತಂದೆತಾಯಿಗಳ ಸಂಖ್ಯೆ ಹೆಚ್ಚು, ಮಕ್ಕಳ ಸಂಖ್ಯೆ ಕಡಿಮೆ. ಆದ್ದರಿಂದ ಮಕ್ಕಳ ನಿರ್ದೇಶನದಂತೆ ತಂದೆತಾಯಿಗಳು ನಡೆದುಕೊಳ್ಳಬೇಕು. ಇಂದಿನ ಮಕ್ಕಳಿಗೆ ಎಂದೂ ಇಲ್ಲದ ಪ್ರೀತಿ, ಸೌಕರ್ಯಗಳು ಇವೆ. ಇದು ಸಂತೋಷದ ವಿಷಯ. ಇಂತಹ ದೇಶ ಏನನ್ನಾದರೂ ಸಾಧಿಸಬಹುದು. ಇಂದಿನ ಯುವಪೀಳಿಗೆಯಲ್ಲಿ ಬೇಕಾದಷ್ಟು ಹಣ, ಆಸ್ತಿ ಇದೆ. ಅವರಿಗೆ ಅಧಿಕಾರ ಮತ್ತು ಕೀರ್ತಿ ದೊರೆಯುತ್ತಿದೆ. ಇದರೊಂದಿಗೆ ವಿವೇಕ ಬೇಕಾಗಿದೆ. ಇಂದಿನ ತಾರುಣ್ಯದ ಸಮಾಜವನ್ನು ಗಮನಿಸಿದಾಗ ಸುಭಾಷಿತವೊಂದು ನೆನಪಾಗುತ್ತದೆ:

**ಯೌವನಂ ಧನಸಂಪತ್ತಿಃ ಪ್ರಭುತ್ವಂ ಅವಿವೇಕತಾ ।**
**ಏಕೈಕಮಪಿ ಅನರ್ಥಾಯ ಕಿಂ ಯತ್ರ ಚತುಷ್ಟಯಂ ॥**

ಯೌವನ, ಧನಸಂಪತ್ತು, ಅಧಿಕಾರ ಮತ್ತು ಅವಿವೇಕ – ಇವುಗಳಲ್ಲಿ ಒಂದು ಇದ್ದರೂ ಅನರ್ಥ ಉಂಟಾಗುವಾಗ, ಇವು ನಾಲ್ಕೂ ಇದ್ದರೆ ಏನಾಗಬಹುದು ಎಂದು ಉದ್ಗರಿಸಿದ್ದಾರೆ ನಮ್ಮ ಹಿರಿಯರು. ಯಾವುದು ಜೀವನಕ್ಕೆ ಮುಖ್ಯ, ಒಳ್ಳೆಯದು, ಯಾವುದಲ್ಲ ಎಂಬುದು ತಿಳಿಯದಿದ್ದರೆ ಜೀವನ ಕ್ಲಿಷ್ಟವಾಗುತ್ತದೆ.

### ಅಸೂಯೆ

ಕೆಲವರನ್ನು ಅಸೂಯೆ ಕಾಡುವುದು. ಅಸೂಯೆ ಸಂಕುಚಿತ ಮನೋಭಾವದ ಮತ್ತೊಂದು ರೂಪ. ತಮಗೆ ಎಲ್ಲಾ ಇದ್ದರೂ ಇತರರಿಗೆ ಒಳ್ಳೆಯದಾದರೆ ಅಸೂಯಾಪರರು ಸಹಿಸಲಾರರು. 'ಅವರಿಗೆ ಯೋಗ್ಯತೆ ಇಲ್ಲದಿದ್ದರೂ ಅದೃಷ್ಟ ಒಲಿದು ಏನೆಲ್ಲ ಸಿಕ್ಕಿಬಿಟ್ಟಿದೆ!' ಎಂದು ಕರುಬುವರು. ಅವರ ಮನಸ್ಸು ತಳಮಳಗೊಂಡು ಅಶಾಂತವಾಗುವುದು. ಸುಖಜೀವನಕ್ಕೆ ಬೇಕಾದುದೆಲ್ಲ ಇದ್ದರೂ ಅದನ್ನು ಅನುಭವಿಸಲಾರದೆ ಹೋಗುವರು. ಕೈಗೆ ಬಂದದ್ದು ಬಾಯಿಗಿಲ್ಲವಾಗುವುದು. ಜೀವನದಲ್ಲಿ ಗಳಿಸಲು ಪಡೆಯಲು ಸಾಧಿಸಲು ಅನುಭವಿಸಲು ಎಲ್ಲರಿಗೂ ಅವಕಾಶವಿದೆ. ಅದನ್ನು ಉಪಯೋಗಿಸಿಕೊಂಡು ಅವರವರ ಗುರಿ ತಲುಪಲು ಸಾಧ್ಯವಿದೆ. ಮಾಡಬೇಡಿ ಎಂದು ಯಾರೂ ಹೇಳಿಲ್ಲ. ನಾವು ಪ್ರಯತ್ನಿಸಿ ನಮ್ಮ ಪುರೋಭಿವೃದ್ಧಿಗೆ ಶ್ರಮಿಸುವುದಕ್ಕೆ ಬೇಕಾದ ಶಕ್ತಿ ಸಾಮರ್ಥ್ಯಗಳು ನಮಗೆ ಲಭಿಸಿವೆ. ನಾವೂ ಸಾಧಿಸಿ ನಮ್ಮ ಗುರಿಯೆಡೆಗೆ ಮುಂದುವರಿಯಬಹುದು. ಇತರರ ಬಗ್ಗೆ ಅಸೂಯೆ ಉಂಟಾದರೆ ಪ್ರಶಸ್ತವಾದ ಆ ಶಕ್ತಿಯ ಬಹುಭಾಗ ವ್ಯರ್ಥವಾಗುತ್ತದೆ. ಇದೇ ಅಸೂಯೆಯಿಂದ ನಮಗಾಗುವ ಹಾನಿ. ಇತರರ ಬಗ್ಗೆ ಅಸೂಯೆಪಡುವ ಕಾಲ ಮತ್ತು ಶಕ್ತಿಯನ್ನು ನಮ್ಮ ಜೀವನಕ್ಕೆ ತೊಡಗಿಸಿದರೆ ನಾವು ಉದ್ಧಾರವಾಗುವೆವು. ನಮಗೆ ಶಾಂತಿ, ಸಮಾಧಾನ ಬೇಕಾದರೆ ಅನಸೂಯರಾಗಬೇಕು. ಎಲ್ಲಾ ವ್ಯಾಧಿಗಳಿಗೂ ಔಷಧವಿದೆ. ಆದರೆ ಅಸೂಯೆಯ ವ್ಯಾಧಿಯಿಂದ ಪಾರಾಗಬೇಕಾದರೆ ಅದನ್ನು ಬಿಡುವುದೊಂದೇ ಔಷಧ.

### ಪಾಂಡಿತ್ಯ

ಹಣ ಅಥವಾ ಆಸ್ತಿಯ ಲೋಭದಿಂದ ಮಾತ್ರವೇ ನಮ್ಮ ಜೀವನ ಕ್ಲಿಷ್ಟವಾಗುತ್ತಿಲ್ಲ. ಪಾಂಡಿತ್ಯದ ಮದವೂ ಅಷ್ಟೇ ಹಾನಿಕಾರಕವಾಗಿದೆ. ಕೇವಲ ಪಾಂಡಿತ್ಯದಿಂದ ಸೃಷ್ಟಿಯಾಗುವುದು, ಕೆಲಸಕ್ಕೆ ಬಾರದ ಆಲೋಚನೆಗಳು, ದಾರಿ ತಪ್ಪಿಸುವ ಸಂಶೋಧನೆಗಳು, ಸಾಮಾನ್ಯರ ಮನಸ್ಸು ಬುದ್ಧಿಗಳನ್ನು ಕದಡಿಸುವ ಭಾಷ್ಯಗಳು, ಶಾಸ್ತ್ರದ ಕಗ್ಗಂಟುಗಳು. ಪಾಂಡಿತ್ಯದೊಂದಿಗೆ ಅನುಭವ ಸೇರಬೇಕು. ನಾವು ತಿಳಿದಿರುವುದನ್ನು ಉಪಯೋಗಿಸಿ ನೋಡಬೇಕು. ಅದು ಸರಿಯೇ ಎಂದು ಪರೀಕ್ಷಿಸಬೇಕು. ಅವಕಾಶ ದೊರೆತಾಗಲೆಲ್ಲ ಮತ್ತೆ ಮತ್ತೆ ನಮ್ಮ ತಿಳಿವಳಿಕೆಯನ್ನು ಪರೀಕ್ಷಿಸಬೇಕು. ಆಗಲೇ ಅದು ಯಾವಾಗಲೂ ಸರಿಯಾಗಿ ಕೆಲಸ ಮಾಡು

ತ್ತದೆಯೇ ಇಲ್ಲವೇ ಎಂದು ತಿಳಿಯುವುದು. ಶ್ರೀರಾಮಕೃಷ್ಣರು ತಮ್ಮ ಅನುಭವಗಳನ್ನು ಯಾವಾಗಲೂ ಪರೀಕ್ಷಿಸುತ್ತಿದ್ದರು. ಅವರ ಅನುಭವಗಳನ್ನು ಪರೀಕ್ಷಿಸುವಂತೆ ತಮ್ಮ ಶಿಷ್ಯರಿಗೂ ಹೇಳುತ್ತಿದ್ದರು. ಪರೀಕ್ಷಿಸದೆ ಸ್ವೀಕರಿಸಬೇಡಿ ಎಂದು ಎಚ್ಚರಿಸುತ್ತಿದ್ದರು.

## ನಿರ್ದುಷ್ಟ ಪಾಂಡಿತ್ಯ

ನಾವು ಇತರರ ಮುಂದಿಡುವ ವಿಷಯಗಳು – ಅವು ನಿಯಮಗಳಾಗಿರಲಿ, ತತ್ತ್ವಗಳಾಗಿರಲಿ, ಅಭಿಪ್ರಾಯಗಳಾಗಿರಲಿ ಅಥವಾ ಸಂಶೋಧನೆಯ ಫಲವಾಗಿರಲಿ – ಮೊದಲನೆಯದಾಗಿ ಅವು ಸರಿಯಾಗಿರಬೇಕು, ಸತ್ಯವಾಗಿರಬೇಕು, ಎರಡನೆಯದಾಗಿ ಉಪಯೋಗಕರವಾಗಿರಬೇಕು. ಸತ್ಯದೂರವಾದ ವಿಷಯಗಳನ್ನು ತಿಳಿಸುವುದರಿಂದ, ಹರಡುವುದರಿಂದ ಇತರರಿಗೆ ಹಾನಿಯುಂಟಾಗುತ್ತದೆ. ಅನುಪಯೋಗಿಯಾದ ವಿಷಯಗಳಿಂದ ಅವರ ಬುದ್ಧಿ ಕದಡುತ್ತದೆ ಮತ್ತು ಕಾಲ ವ್ಯರ್ಥವಾಗುತ್ತದೆ. ಪಾಂಡಿತ್ಯಕ್ಕಾಗಿ ಪಾಂಡಿತ್ಯವೆಂದು ನಂಬಿರುವವರಿಂದ ಸಾಮಾನ್ಯರ ಜೀವನ ಕ್ಲಿಷ್ಟವಾಗುತ್ತದೆ. ಪಾಂಡಿತ್ಯದ ಉಪಯೋಗ, ಕ್ಲಿಷ್ಟವಾದ ವಿಷಯಗಳನ್ನು ತತ್ತ್ವಗಳನ್ನು ಎಲ್ಲರಿಗೂ ಅರ್ಥವಾಗುವಂತೆ ಸರಳವಾಗಿ ತಿಳಿಸುವುದು; ಸರಳವಾದುದನ್ನು ಕ್ಲಿಷ್ಟಗೊಳಿಸುವುದಲ್ಲ! ಪಾಂಡಿತ್ಯದ ಉಪಯೋಗ ತತ್ತ್ವಪ್ರತಿಪಾದನೆ, ತತ್ತ್ವಗಳನ್ನು ಸುಲಭವಾಗಿ ಸಾಮಾನ್ಯರಿಗೆ ತಿಳಿಯುವಂತೆ ವಿವರಿಸುವುದು. ಇದೇ ಸಮಾಜಕ್ಕೆ ಅವರು ನೀಡುವ ಕೊಡುಗೆ. ಅದರಲ್ಲಿ ಪ್ರಾಮಾಣಿಕತೆ ಇರಬೇಕು, ಸರಳತೆ ಇರಬೇಕು. ಅದೇ ನಿರ್ದುಷ್ಟ ಪಾಂಡಿತ್ಯ. ಈ ವಿಷಯದಲ್ಲಿ ಶ್ರೀರಾಮಕೃಷ್ಣರು ಅದ್ವಿತೀಯರು. ಎಂತಹ ಪಂಡಿತರಿಗೂ ವಾಗ್ಮಿಗಳಿಗೂ ಯೋಗಿಗಳ ಅನುಭವಗಳಿಗೂ ನಿಲುಕದ ಆಧ್ಯಾತ್ಮಿಕ ತತ್ತ್ವಗಳನ್ನು ನಿರಕ್ಷರಕುಕ್ಷಿಗಳಿಗೂ ಅರ್ಥವಾಗುವಂತೆ, ಕೆಲವು ವೇಳೆ ಹಾಸ್ಯವಾಗಿ, ನಿತ್ಯಜೀವನದ ಉದಾಹರಣೆಗಳೊಂದಿಗೆ ವಿವರಿಸುತ್ತಾರೆ. ಅವರ ವಿವರಣೆಯನ್ನು ಪಂಡಿತರು ಅವಾಕ್ಕಾಗಿ ಕೇಳುತ್ತಿದ್ದರು. ಇದಕ್ಕೆ ಕಾರಣ, ವಿವರಿಸುವ ಸತ್ಯಗಳನ್ನು ಅವರು ಅನುಭವಿಸಿದ್ದರು. ಅವರ ವಿವರಣೆ ಅನುಭವದ ಆಳದಿಂದ ಬರುತ್ತದೆ. ತತ್ತ್ವದ ಯಾವ ಭಾವವನ್ನು ವಿವರಿಸುತ್ತಿದ್ದರೋ ಅದರಲ್ಲಿ ಅವರು ತಲ್ಲೀನರಾಗಿರುತ್ತಿದ್ದರು.

## ಶೋಷಣೆ

ಇನ್ನೊಂದು ಬಗೆಯ ಧಾರ್ಮಿಕ ಪ್ರವಚನಕಾರರಿದ್ದಾರೆ. ಅವರ ಪ್ರವಚನ ಕೀರ್ತಿಯ ಆಸೆಯಿಂದ ಪ್ರಚೋದಿತವಾಗಿ ಆಧಾರರಹಿತ, ಸತ್ಯದೂರವಾದ ವಿಷಯಗಳನ್ನು ಆಕರ್ಷಕವಾಗಿ ಮಂಡಿಸುತ್ತಾರೆ. ಅವರ ಶಬ್ದಝುರಿ, ಶಾಸ್ತ್ರವ್ಯಾಖ್ಯಾನಕೌಶಲದಿಂದ ಆಕರ್ಷಿತರಾದವರು, ಅವರು ಎಷ್ಟೇ ವಿದ್ಯಾವಂತರಾಗಿದ್ದರೂ, ಮೋಸಹೋಗಿ ಅವರ ಜೀವನ ಅಪಾರ ಹಾನಿಗೆ ಒಳಗಾಗುತ್ತದೆ. ತಪ್ಪಾಗಿ ತಿಳಿದ ತತ್ತ್ವದಿಂದ ನಮ್ಮ ಜೀವನಕ್ಕೆ ಆಘಾತವಾಗುತ್ತದೆ. ಆಧಾರವಿಲ್ಲದ ವಿಷಯಗಳನ್ನು ಸತ್ಯಗಳಂತೆ ನಂಬಿಕೆಗಳಂತೆ ಹರಡಿದರೆ ಸಮಾಜಕ್ಕೆ ಮೋಸ ಮಾಡಿದಂತೆ ಆಗುವುದು. ಇದು ಹಣ ಅಧಿಕಾರ ಮುಂತಾದ ವಿಷಯಗಳಲ್ಲಿ ಮೋಸ ಮಾಡುವುದಕ್ಕಿಂತ ಕಡಿಮೆಯೇನಲ್ಲ. ಸಾಮಾನ್ಯರ ಜೀವನದ ಕ್ಲಿಷ್ಟತೆಗೆ ತಮ್ಮ ಕೊಡುಗೆಯನ್ನೂ ಸೇರಿಸಿದಂತಾಗುತ್ತದೆ.

## ಸಾಧನ, ಗುರಿಯಲ್ಲ

ಮೇಲಿನ ವಿವರಣೆಯಿಂದ ಧನಾರ್ಜನೆ, ಸುಖಾಪೇಕ್ಷೆ, ಇವೆಲ್ಲಾ ವಿನಾಶಕಾರಿ ಎಂದು ಭಾವಿಸಬೇಕಾಗಿಲ್ಲ. ನಿತ್ಯಜೀವನದ ಆವಶ್ಯಕತೆಗಳನ್ನು ಪೂರೈಸಲು ಬಡವರು ಕಷ್ಟಪಟ್ಟು ಹಣ ಸಂಪಾದಿಸಬೇಕಾಗಿದೆ. ಅನೇಕರು ತಮ್ಮ ಆದಾಯದ ಮಿತಿಯಲ್ಲಿ ಸಂಯಮದಿಂದ ಯೋಗ್ಯ ಜೀವನ ನಡೆಸುತ್ತಿರುವರು, ಅಪಾರ ಸಂಪತ್ತಿನ ಒಡೆಯರಾಗಿರುವವರು. ಅದನ್ನು ದೇಶದ ಸೇವೆಗೆ ಅಭ್ಯುದಯಕ್ಕೆ ವಾಣಿಜ್ಯ ಕೈಗಾರಿಕೆ ಶಿಕ್ಷಣ ಆರೋಗ್ಯ ಮೊದಲಾದ ಕ್ಷೇತ್ರಗಳಲ್ಲಿ ತೊಡಗಿಸಿರುವರು. ಯುವ ಉದ್ಯಮಿಗಳು ಆಧುನಿಕ ತಂತ್ರಜ್ಞಾನವನ್ನಾಧರಿಸಿದ ಉದ್ಯಮಗಳಲ್ಲಿ ಯಶಸ್ವಿಯಾಗಿ ದೇಶದ ಆರ್ಥಿಕ ಸಂಪನ್ನತೆಗೆ ಕೊಡುಗೆ ನೀಡುತ್ತಿರುವರು. ಹಣ, ನಿತ್ಯಜೀವನಕ್ಕೆ ಎಲ್ಲರಿಗೂ ಆವಶ್ಯಕ. ಹಣ ಮತ್ತು ಸಂಪತ್ತು ಜೀವನದ ಗುರಿಗೆ – ಅವು ಎಷ್ಟೇ ಮಹತ್ತಾಗಿರಲಿ ಅಥವಾ ಅಲ್ಪವಾಗಿರಲಿ – ಮುಖ್ಯ ಸಾಧನಗಳು, ಗುರಿಯಲ್ಲ. ಅವನ್ನೇ ಗುರಿ ಎಂದು ತಿಳಿದು ಅವನ್ನು ಬೆನ್ನಟ್ಟಿ ಹೋದಾಗ ಉಂಟಾಗುವ ಪರಿಣಾಮಗಳನ್ನು ಇಲ್ಲಿ ಸೂಚಿಸಿದೆ, ಅಷ್ಟೆ. ಸಾಮಾನ್ಯರ ಜೀವನವನ್ನು ಪರಿಗಣಿಸುವುದಾದರೆ, ಹಣ ಅವರ ಆವಶ್ಯಕತೆಗಳನ್ನು ಪೂರೈಸಲು ಬೇಕಾಗುತ್ತದೆ. ಇದನ್ನು ಚೀನೀಯರ ಅನುಭವದ ಮಾತೊಂದು ಚೆನ್ನಾಗಿ ವಿವರಿಸುತ್ತದೆ: 'ಮನುಷ್ಯನ ಆವಶ್ಯಕತೆಗಳಿಗೆ ಸ್ಥಾನವಿದೆ, ಆಶೆಬುರುಕತನಕ್ಕಲ್ಲ.'

ನಮ್ಮ ಜೀವನ ಯಾವುದೋ ಒಂದು ಕಾರಣದಿಂದ ಕ್ಲಿಷ್ಟವಾಗುವುದಿಲ್ಲ. ಮೇಲೆ ತಿಳಿಸಿದ ಎಲ್ಲಾ ಅಂಶಗಳೂ ನಮ್ಮ ಜೀವನವನ್ನು ಕ್ಲಿಷ್ಟಗೊಳಿಸುತ್ತವೆ. ಅವು ಒಂದಕ್ಕೊಂದು ಸಂಬಂಧಪಟ್ಟಿವೆ. ಒಂದು ಮತ್ತೊಂದಕ್ಕೆ ದಾರಿ ಮಾಡಿಕೊಡುತ್ತದೆ. ನಮ್ಮ ಜೀವನ ಕ್ಲೇಶ-ಸಂಕಟಗಳಿಗೆ ಒಳಗಾಗುತ್ತದೆ. ಜೀವನವನ್ನು ಗೋಜಲು ಮಾಡಿಕೊಳ್ಳುವುದು ಸುಲಭ. ಅದರಿಂದ ಬಿಡಿಸಿಕೊಂಡು ಹೊರಬರುವುದು ಕಷ್ಟ. ಗೋಜಲನ್ನು ಬಿಡಿಸಬೇಕಾದರೆ, ಮೊದಲು ಅದು ಹೇಗೆ ಆಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ನಮಗೆ ತಲೆನೋವು ಬಂದಿದ್ದರೆ, ಅದು ಯಾವ ಕಾರಣದಿಂದ ಉಂಟಾಗಿದೆ ಎಂದು ಪರೀಕ್ಷಿಸಿದ ನಂತರವೇ ವೈದ್ಯರು ಔಷಧ ಕೊಡುವಂತೆ ಇದು. ನಮ್ಮ ಜೀವನದ ಕ್ಲಿಷ್ಟತೆಯನ್ನು ಸರಳಗೊಳಿಸಲು ನಮಗೊಂದು ದಾರಿ ಬೇಕಾಗುತ್ತದೆ. ಅದರಲ್ಲಿ ಹೋಗಲು ವಿಶೇಷ ಪ್ರಯತ್ನವನ್ನು ಮಾಡಬೇಕಾಗುತ್ತದೆ. ನಮ್ಮ ಜೀವನಶೈಲಿಯನ್ನೇ ಬದಲಾಯಿಸಿಕೊಳ್ಳಬೇಕಾಗುತ್ತದೆ. ನಾವು ಜೀವನವನ್ನು ನೋಡುವ ದೃಷ್ಟಿಯನ್ನು ಬದಲಾಯಿಸಬೇಕಾಗುತ್ತದೆ. ನಮ್ಮ ಜೀವನ ಜಟಿಲವಾಗುವುದಕ್ಕೆ ಎಷ್ಟು ಸಮಯ ಹಿಡಿಯಿತೋ ಅದರಿಂದ ಬಿಡಿಸಿಕೊಳ್ಳಬೇಕಾದರೆ ಅಷ್ಟೇ ಅಥವಾ ಇನ್ನೂ ಹೆಚ್ಚು ಸಮಯ ಹಿಡಿಯುವುದು. ಇದಕ್ಕೆ ಹೋರಾಟ, ತಾಳ್ಮೆ, ಸಾಧನೆ ಬೇಕಾಗುವುದು. ಈ ಹೋರಾಟವೇ ನಮ್ಮ ಜೀವನದ ಸಾರ. ❁